೧೫ಳಿ ವೈದ್ಯರನ್ನು ಸ್ನಾತಕೋತ್ತರ .ಪದವೀಧರರನ್ನು ೧೫ನೇ ತಾರೀಖಿನೊಳಗೆ ಸಂದರ್ಶನ ಮಾಡ ಲಾಗಿದೆ. ಮುಂದಿನ ತಿಂಗಳು ೧೫ನೇ ದಿನಾಂಕದೊಳಗೆ ವೈದ್ಯರನ್ನು ನೇಮಿಸುತ್ತೇವೆ. ಈ ೨ ಭಾಗದಲ್ಲಿ ಒಂದರಲ್ಲಿ ಈಗಾಗಲೇ ೨೪-೧-೮೬ ರಂದು ವೈದ್ಯರು ಇದ್ದಾರೆ. ಆದ್ದರಿಂದ ಈ ವಿಚಾರದಲ್ಲಿ ಮಾನ್ಯ ಸದಸ್ಯರು ಕಳವಳ ಪಡುವುದು ಅನಾವಶ್ಯಕ.

(೧೫) ಶಿಗ್ಗಾಂವ್ ತಾಲ್ಲೂಕಿನ ದುಂಡಶಿ ಗ್ರಾಮದ ಆಯುರ್ವೇದ ಆಸ್ಪತ್ರೆಗೆ ಔಷಧಿಗಳ ಸರಬರಾಜು.

ಶ್ರೀ ನೀಲಕಂಠಗೌಡ ವಿ. ಪಾಟೀಲ್ (ಶಿಗ್ಗಾಂವ).—ಮಾನ್ಯ ಅಧ್ಯಕ್ಷರೇ ಶಿಗ್ಗಾಂವ್ ತಾಲ್ಲೂಕು ದುಂಡಶಿ ಗ್ರಾಮದಲ್ಲಿ ಒಂದು ಆಯುರ್ವೇದಿಕ ಆಸ್ಪತ್ರೆಯಿರುತ್ತದೆ. ಈ ಆಸ್ಪತ್ರೆಗೆ ದಿನನಿತ್ಯ ಉಪ ಯೋಗಿಸುವ ಔಷಧಿಯನ್ನು ಕೊಡಮಾಡದೆ ಸುಮಾರು ೫೦೦೦ ಮೌಲ್ಯದ್ದು ಔಷಧಿಯನ್ನು ಕೇವಲ ಹಂರಂಕಂ. ಕರ್ಜ್ಜಿಗೆ ಉಪಯೋಗಿಸುವ ಔಷಧಿಯನ್ನು ಒದಗಿಸಿದ್ದಾರೆ. ಇದು ಯಾವ ನ್ಯಾಯ? ಕಾರಣ ಈ ವಿಷಯ ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ ? ಕಾರಣ ಈ ಕೊಡಮಾಡಿದಂಥ ಹುರುಕಿ ಕಜ್ಜಿಗೆ ಉಪಯೋಗಿಸುವ ಔಷಧಿಯನ್ನು ಬದಲಿಸಿ ದಿನನಿತ್ಯ ಉಪಯೋಗಿಸುವ ಔಷಧಿಯನ್ನು ಕೊಡ ಮಾಡಬೇಕು. ಈ ವಿಷಯವನ್ನು ಅಧ್ಯಕ್ಷರ ಮುಖೇನ ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಚ್. ಎಲ್. ತಿಮ್ಮೇಗೌಡ. (ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಅಲ್ಲಿರತಕ್ಕಂಥ ಆಸ್ಪತ್ರೆ ಆಯುರ್ವೇದಿಕ ಆಸ್ಪತ್ರೆಯಲ್ಲ, ಅದು ಆಲೋಪತಿಕ್ ಆಸ್ಪತ್ರೆ ಎಂದು ತಿಳಿದುಕೊಳ್ಳಬೇಕು. ೫೦ ಸಾವಿರ ರೂಪಾಯಿಗಳ ಔಷಧಿಯನ್ನು ಒದಗಿಸುವುದರಲ್ಲಿ ಈಗಾಗಲೇ ಒಂಬತ್ತೂಸಾವಿರ ರೂಪಾಯಿಗಳಷ್ಟು ಔಷಧಿಗಳನ್ನು ಬೆಂಗಳೂರಿನಿಂದ ಕಳುಹಿಸಿಕೊಡಲಾಗಿದೆ. ೧೦೦ಕ್ಕೆ ೪೦ ಭಾಗದಷ್ಟು ಔಷಧಿಗಳನ್ನು ಅವರೇ ಕೊಳ್ಳಲೂ ಕೂಡ ಅಧಿಕಾರವನ್ನು ಕೊಟ್ಟಿದ್ದೇವೆ. ದಿನನಿತ್ಯ ಬಳಕೆಗೆ ಬೇಕಾದಂಥ ಔಷಧಿಗಳ ಬಗ್ಗೆ ಪಟ್ಟಿಯನ್ನು ಕಳುಹಿಸಿಕೊಟ್ಟರೆ ಔಷಧಿಗಳನ್ನು ಕಳುಹಿಸಿಕೊಡ ತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ. ಈಗ ಕಳುಹಿಸಿಕೊಟ್ಟಿರತಕ್ಕಂಥ ಔಷಧಿಯ ಬಗ್ಗೆ ತಾವು ಹೇಳಿರುವ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ಅಲ್ಲಿ ಏನೂ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆಂದು ಹೇಳುತ್ತೇನೆ.

Statement by the minister

(1) Minimu mwages boy Laboure in Scauity relief operation.

ಶ್ರೀ ಡಿ. ಮಂಜುನಾಥ್ (ಸನ್ಮಾನ್ಯ ಕಾರ್ಮಿಕ ಸಚಿವರು).—೩೩ಳಿ ಮೇರೆಗೆ ಶ್ರೀ ಇ. ನಂಜೇ ಗೌಡರ ಪ್ರಶ್ನೆಗೆ ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ.

ಅಭಾವ ಪರಿಹಾರ ಕಾಮಗಾರಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕೊಡಬೇಕಾದ ವೇತನ, ಕನಿಷ್ಠ ವೇತನ ಕಾಯ್ದೆಯ ಪ್ರಕಾರ ರೂ. ೮-೨೫(ಮೂಲ ವೇತನ ೭-೮೦ ರೂ ೦-೪೫ ರೂ. ತುಟ್ಟಿ ಭತ್ಯ) ಮಾನ್ಯ ಕಂದಾಯ ಮಂತ್ರಿಗಳು ೮-೦೦ ರೂ, ವೇತನ ಇದರ ಜೊತೆಗೆ ಕಡ್ಡಾಯವಾಗಿ ಗೋಧಿಯನ್ನು ವಿತರಣೆ ಮಾಡುವಾಗ ರೂ.೧-೫೦ ಬೆಲೆಯನ್ನು ಕೆ.ಜಿ. ಒಂದಕ್ಕೆ ರೂ.-೧-೨೫ ಇಳಿಸಿ ಮಾರುವುದಾಗಿ ಹೇಳಿದರು. ಅಂದರೆ ಒಟ್ಟು ವೇತನ ರೂ.೮-೨೫ ರೂ. ಆಗುವುದು. ಕನಿಷ್ಠ ವೇತನ ವನ್ನು ರೂ.೮-೨೫ ಕ್ಕಿಂತ ಕಡಿಮೆ ಮಾಡುವುದು ಕಾನೂನು ಪ್ರಕಾರ ಸರಿಯಲ್ಲ. ಆದ್ದರಿಂದ ಕನಿಷ್ಠ ವೇತನವನ್ನು ರೂ.೮-೨೫ ಕೊಟ್ಟು ಗೋಧಿಯನ್ನು ಮೊದಲಿನಂತೆಯೇ ೧-೫೦ರೂ. ಬೆಲೆಗೆ ಕೊಡಲಾಗುವುದು. ಈ ಆದೇಶವನ್ನು ಸರ್ಕಾರದವರು ಈಗಾಗಲೇ ಹೊರಡಿಸಿದ್ದಾರೆ.